# ಚುನಾವಣಾಧಿಕಾರಿಗಳ ಕಛೇರಿ,

## ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್

ವಿಜ್ಞಾನ ಭವನ ನಂ.24/3, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ ಬೆಂಗಳೂರು-20

ದಿನಾಂಕ:11-01-2025

### -:ಪ್ರಕಟಣೆ:-

ಸದರಿ ಸಂಘದ ವಿರುದ್ಧ ಕರ್ನಾಟಕ ಸಂಘಗಳ ನೊಂದಣಿಕಾಯ್ದೆ 1960 ರ ಕಲಂ 25 ರ ವಿಚಾರಣಾ ವರದಿಯಲ್ಲಿ ತಿಳಿಸಿರುವ ಸದಸ್ಯತ್ವ ನೊಂದಣಿಯು ಪಾರದರ್ಶಕವಾಗಿರುದಿಲ್ಲ ಹಾಗೂ ನಿಯಮ ಬಾಹಿರವಾಗಿರುತ್ತದೆಂದು ಅಭಿಪ್ರಾಯ ಸಲ್ಲಿಸಿರುತ್ತಾರೆ. ಆದಕಾರಣ ಸದರಿ ಸಂಘದ ಮತದಾರರ ಪಟ್ಟಿಯನ್ನು ವಿಚಾರಣಾ ವರದಿಯಲ್ಲಿನ ಅಂಶಗಳನ್ನು ಪರಿಗಣಿಸಿ ಈ ನ್ಯೂನ್ಯತೆಗಳನ್ನು ಸರಿಪಡಿಸಿ ಚುನಾವಣಾ ಜರುಗಿಸುವುದು ಸೂಕ್ತವಾಗಿರುವದಾಗಿ ಆಡಳಿತಾಧಿಕಾರಿಗಳಿಗೆ ಮಾನ್ಯ ಜಿಲ್ಲಾ ನೋಂದಣಾಧಿಕಾರಿಗಳು, ಮೂರನೇ ವಲಯ, ಬೆಂಗಳೂರು ನಗರ ಜಿಲ್ಲೆ. ಬೆಂಗಳೂರುರವರು ನಿರ್ದೇಶನ ನೀಡಿರುತ್ತಾರೆ. ಸದರಿ ವರದಿಯ ರೀತ್ಯಾ ಕ್ರಮವಿಡಲು ಆಡಳಿತಾಧಿಕಾರಿಗಳು ಚುನಾವಣಾಧಿಕಾರಿಗಳಿಗೆ ಸೂಕ್ತ ಕ್ರಮ ವಹಿಸಲು ತಿಳಿಸಿರುತ್ತಾರೆ. ಆದಕಾರಣ ಈಗಾಗಲೆ ಪ್ರಕಟಿಸಸಿರುವ ಕರಡು ಮತದಾರರ ಪಟ್ಟಿಯಲ್ಲಿ ಕಲಂ 25 ರ ವಿಚಾರಣಾ ವರದಿಯಲ್ಲಿ ತಿಳಿಸಿರುವ ಸದಸ್ಯರು ಸೇರ್ಪಡೆಯಾಗಿರುವ ಕಾರಣ ಇದರ ಬಗ್ಗೆ ಪರಿಶೀಲಿಸಿ ಮತದಾರರ ಪಟ್ಟಿಯನ್ನು ಅಂತಿಮಗೊಳಿಸಲು ಸಮಯವಕಾಶ ಅಗತ್ಯವಿರುವ ಕಾರಣ ದಿನಾಂಕ;13-01-2025ಕ್ಕೆ ಪ್ರಕಟಿಸಬೇಕಿದ್ದ ಅಂತಿಮ ಮತದಾರರ ಪಟ್ಟಿ ಹಾಗೂ ಮುಂದಿನ ಚುನಾವಣಾ ಪ್ರಕ್ರಿಯೆಗಳನ್ನು ಮುಂದೂಡಿದೆ.

(ಪವನ್ ಕುಮಾರ್ ಎಸ್)
ಚುನಾವಣಾಧಿಕಾರಿ
ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್,
ಬೆಂಗಳೂರು

ಪ್ರತಿಯನ್ನು ಗೌರವಪೂರ್ವಕವಾಗಿ:

1) ಸಹಕಾರ ಸಂಘಗಳ ಉಪ ನಿಬಂಧಕರು, 3ನೇ ವಲಯ, ಬೆಂಗಳೂರು ನಗರಜಿಲ್ಲೆ ರವರಿಗೆ ಸಲ್ಲಿಸಿದೆ.
2) ಆಡಳಿತಾಧಿಕಾರಿಗಳು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ಬೆಂಗಳೂರು ರವರಿಗೆ ಸಲ್ಲಿಸಿ, ಸಂಘದ ಸೂಚನಾ ಫಲಕ ಹಾಗೂ ಸಂಘದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.